ಅಧ್ಯಕ್ಷರು.—ನನ್ನಲ್ಲಿ ಈ ದಿವಸ ೧೫ ಪ್ರಶ್ನೆಗಳಿದ್ದವು. ಅವುಗಳಲ್ಲಿ ಮಾನ್ಯ ಪಾಟೀಲರಿಗೆ ಸಂಬಂಧ ಪಟ್ಟಿದ್ದು ಅವರಿಗೆ ಬಹಳ ಪ್ರಾಮುಖ್ಯವಾದುದಾಗಿದ್ದರೆ, ಮಾನ್ಯ ವಾಟಾಳರ ಕ್ಷೇತ್ರಕ್ಕೆ ಸೇರಿದ ಪ್ರಶ್ನೆ ಶ್ರೀ ವಾಟಾಳರಿಗೆ ಬಹಳ ಪ್ರಾಮುಖ್ಯವಾದದ್ದು. ಆದರೆ ನನಗೆ ಅದು ಮುಖ್ಯವಲ್ಲ. ಎಲ್ಲರ ಪ್ರಶ್ನೆಯೂ ಅವರವರಿಗೆ ಪ್ರಾಮುಖ್ಯವಾದುದರಿಂದ ಇಲ್ಲಿ ಎಲ್ಲರ ಪ್ರಶ್ನೆಗೂ ಒಂದು ಸರಿಸಮಾನವಾದ ಅವಕಾಶವಿರಬೇಕು. ಅನ್ನುವುದು ನನ್ನ ಮುಖ್ಯ ಉದ್ದೇಶ. ಅಷ್ಟಲ್ಲದೆ ನನಗೆ ಯಾವ ಪ್ರಶ್ನೆಗೆ ಹೆಚ್ಚಿನ ಅವಕಾಶ ಕೊಡಲಿ ಅಥವಾ ಯಾವ ಪ್ರಶ್ನೆಗೆ ಕಡಿಮೆ ಅವಕಾಶ ಕೊಡಲಿ ಆದರಿಂದ ನನಗೇನೂ ಲಾಭ ಬರುವುದಿಲ್ಲ ; ಅಥವಾ ಆದರಿಂದ ನನಗೆ ನಷ್ಟವೂ ಆಗುವುದಿಲ್ಲ. ಆದರೆ ಮಾನ್ಯ ಪಾಟೀಲ್ ಅವರು 'ನೀವು ಹೀಗೆ ಮಾಡುವುದು ಸರಿಯಲ್ಲ' ಎಂದು ಹೇಳಿದ್ದು ಸರಿಯಲ್ಲ. ಅವರು ಜವಾಬ್ದಾರಿಯನ್ನರಿತ ಒಬ್ಬ ಸದಸ್ಯರು, ವೇಲಾಗಿ ಅಡ್ವೊಕೇಟರು, ಅವರಿಗೆ ಅವರು ಹೇಳಿದ್ದು ಸರಿಯಲ್ಲ ಎಂಬುದು ಗೊತ್ತಾಗಿರಬೇಕು. ಆದುದರಿಂದ ಇದನ್ನು ಇಲ್ಲಿಗೆ ಬಿಟ್ಟು ಬಿಡೋಣ. ಇದೇ ಮೊದಲನೇ ಸಾರ್ತಿ ಆದ್ದರಿಂದ ನನಗೆ ಇದನ್ನು ಮುಂದುವರಿಸುವುದಕ್ಕೆ ಇಷ್ಟವಿಲ್ಲ.

For the time being it is ignored.

CALLING ATTENTION TO A MATTER OF URGENT PUBLIC IMPORTANCE

re :—Supersession of Town Municipal Council Bellur

MADAM SPEAKER.—Sri H. T. Krishnappa, to call the attention of the Minister for Municipal Administration.

SRI H.T. KRISHNAPPA (Nagamangala).—I call the attention of the Minister for Municipal Admininistration to the supersession of Town Municipal Council, Bellur.

SRI BASAVALINGAPPA (Minister for municipal Administration).—Sir I state as follows.

The Divisional Commissioner, Mysore Division, Mysore, in his letter dated 22nd November 1972 has reported that the term of the office of the Councillors of the Town Municipal Council, Bellur will expire on 16th January 1973 and requested Government to appoint the Thsildar, Nagamangala Taluk, Nagamangala as Administrator for the said Municipality. Notification appointing the Thasildar, Nagamangala Taluk, Nagamangala as Administrator to the Town Municipal Council, Bellur for a period of 4 months with effect from 17th January 1973 was issued on 15th January 1973.

The Deputy Commissioner, Mandya District, Mandya, in his letter dated 17th January 1973 has now reported that the term of the office of the Councillors of the Town Municipal Council, Bellur expires on 27th April 1975 and not on 16th January 1973 as reported earlier

The normal term of the office of the councillors is four years as per the provisions contained under Section 18 of the Mysore Municipalities Act 1964 and the term of the councillors will commence on the date of publication of their names in the Gazette or immediately after

the expiry of the the term of the office of the outgoing councillors or the period of appointment of an Administrator under Section 315 or the period of supersession under Section 316 whichever is later.

It is ascertained from the Headquarters Assistant to the Deputy Commissioner, Mandya over trunk telephone that the notification issued on 15th January 1973 appointing the Tahsildar Nagamangala Taluk Nagamangala to Administrator, Town Municipal Council, Bellur for a period of 4 months from 17th January 1973 has not been implemented. In other words, the old councillors are still continuing to function as such.

It may be mentioned that the appointment of the Administrator was by oversight in that the Divisional Commissioner has communicated the date of expiry of the council as 16th January 1973 instead of 27th April 1975. Action has since been taken to withdraw the draft notification appointing an Administrator which restores statusquo ante.

It may not be out of place to state that the Town Municipal Council, Bellur is not superseded as stated by ths Hon'ble member. An Administrator was appointed under the provisions contained under Section 315 (1) (c) of the Mysore Municipalities Act 1964 and the said notification is also withdrawn.

ಶ್ರೀ ಎಚ್. ಟಿ. ಕೃಷ್ಣಪ್ಪ.—ತಾವು ಈಗ ಕೊಟ್ಟ ಹೇಳಿಕೆಯಲ್ಲಿ ಮೈಸೂರು ವಿಭಾಗಾಧಿಕಾರಿಗಳಿಂದ ತಾರೀಖು ೨೧ನೆ ಡಿಸೆಂಬರ್ ೧೯೭೨ರಲ್ಲಿ ಕಾಗದ ಬಂದಿತು, ತಾರೀಖು ೧೬ನೆ ಜನವರಿ ೧೯೭೩ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಲಾಯಿತು, ಮತ್ತು ತಾರೀಖು ೧೭ನೆ ಜನವರಿ ೧೯೭೩ರಂದು ಬೆಳ್ಳೂರು ಮುನಿಸಿಪಾಲಿಟಿಯ ಭಾರ್ಜನ್ನು ನಾಗವಂಗಲದ ತಹಶೀಲ್ದಾರರು ವಹಿಸಿಕೊಂಡರೆಂದು ಹೇಳೋಣವಾಯಿತು. ಆದರೆ ಆದೇ ತಾರೀಖು ೧೭ನೇ ಜನವರಿ ೧೯೭೩ರಲ್ಲಿ ಜಿಲ್ಲಾಧಿಕಾರಿಗಳು ಕೊಟ್ಟ ಆರ್ಡರಿನ ಪ್ರಕಾರ ಆ ಬೆಳ್ಳೂರು ಮುನಿಸಿಪಲ್ ಕೌನ್ಸಿಲ್ಲಿನ ಅವಧಿ ೧೯೭೩ರವರೆಗೂ ಇರುತ್ತದೆ, ಅದನ್ನೇಕೆ ರದ್ದು ಮಾಡಿದಿರಿ ಎಂದು ಅವರು ತಿಳಿಸಿದ್ದಾಗ್ಗೂ ಆ ಹಿಂದಿನ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಇಷ್ಟು ನಿದಾನ ವಾಗುವುದಕ್ಕೆ ಕಾರಣವೇನು ? ಇದು ಮೊದಲನೆಯ ಪ್ರಶ್ನೆ.

ಇನ್ನು ಎರಡನೆಯದಾಗಿ—ನಾನು ಮಾನ್ಯ ಮಂತ್ರಿಗಳಿಗೆ ಇದೇ ವಿಚಾರಕುರಿತು ಒಂದು ಪತ್ರ ಬರೆದೆ ಅದಕ್ಕೆ ಅವರಿಂದ ಯಾವ ಉತ್ತರವೂ ಬರಲಿಲ್ಲ. ಆದರೆ ಇನ್ನೂ ಎರಡೂವರೆ ವರ್ಷಗಳ ಅವಧಿ ಇದ್ದಾಗ್ಗೂ ಅದನ್ನು ರದ್ದು ಮಾಡುವುದು ಇಡೀ ಪ್ರಜಾತಂತ್ರಕ್ಕೇ ಕೊಡಲಿಪೆಟ್ಟನ್ನು ಹಾಕಿದಂತೆ ಆಗುವುದಿಲ್ಲವೇ ಎಂಬುದನ್ನು ಕೇಳಿದ್ದೆ ಉತ್ತರವೇ ಬರಲಿಲ್ಲ. ಸರ್ಕಾರದವರು ಇದನ್ನು ಉದ್ದೇಶಪೂರ್ವಕವಾಗಿ ಮಾಡಿದಂತೆ ನನಗೆ ಕಾಣುತ್ತಿದೆ. ಹಾಗಿದ್ದರೆ ಅವರು ಈ ವಿಚಾರದಲ್ಲಿ ಕೂಡಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕಾಗಿತ್ತು. ಅಂಥ ಜರೂರು ಕ್ರಮಗಳನ್ನು ಕೈಗೊಂಡಂತೆ ಮಾನ್ಯ ಸಚಿವರ ಉತ್ತರದಿಂದ ಕಂಡುಬರುವುದಿಲ್ಲ. ಇಲ್ಲಿ ಅವರು ಹೇಳಿರುವುದು.

> "It is ascertained from the Headquarters Assistant to the Deputy Commissioner, Mandya, over trunk telephone that the notification issued on 15th January 1973 appointing the Tahsildar Nagamangala Taluk, Nagamangala as Administrator, Town Municipal Council, Bellur for a period of 4 months from 17th January 1973 has not been implemented. In other words, the old councillors are still continuing to funcition as such."

ಇಲ್ಲಿ ಹೀಗೆ ಹೇಳಿರುವುದರಿಂದ ಇದು ಹೇಗೆ ಸಾಧ್ಯ ? ಇದಕ್ಕೆ ಮಾನ್ಯ ಸಚಿವರು ಸಮಂಜಾಯಿಷಿ ಕೊಡ ಬೇಕು. ನಾವೆ ಏನಾದರೂ ಒಂದು ಕಲ್ಲಿಗೆ ಮೊಟಿಗ್ ನಡೆಯಬೇಕಾಗಿ ಬಂದರೆ ಅದನ್ನು ಮಾಡು ವುದಕ್ಕೆ ಹೇಗೆ ಸಾಧ್ಯ ? ಇಲ್ಲಿ ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ ಒಂದಕ್ಕೊಂದಕ್ಕೆ ಸಮಂಜಸವಾಗಿಲ್ಲ

ಅಧ್ಯಕ್ಷರು :—ತಮಗೆ ಏನು ವಿಷಯಗಳು ಬೇಕಾಗಿದೆ ಅದನ್ನು ತಾವು ಕೇಳಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇಲ್ಲಿ ಮಾನ್ಯ ಸಚಿವರು 'ಓವರ್ ಸೈಟ್'ನಿಂದ' ಎಂದು ಹೇಳಿದ್ದಾರೆ. ಇದರ ಅರ್ಥವೇನು ? ಇದಕ್ಕೆ ಯಾರು ಜವಾಬ್ದಾರರು ? ನಿಮ್ಮ ಆಫೀಸಿನಲ್ಲಿ ಎಲ್ಲಾ ರೆಕಾರ್ಡುಗಳನ್ನೂ ಇಟ್ಟುಕೊಂಡು ಇನ್ನೂ ಎರಡೂವರೆ ವರ್ಷ ಟರ್ಮ್ ಇದ್ದಂತೆ ಅವರನ್ನು ನಿವೃತ್ತಿಮಾಡುವುದೆಂದರೇನು ಅರ್ಥ ? ಇದು ತೀರಾ ಜವಾಬ್ದಾರಿ ರಹಿತವಾದಂಥ ಕೆಲಸ ಎಂದು ಹೇಳದೆ ವಿಧಿಯಿಲ್ಲ ..

SRI K. PUTTASWAMY (Chamundeswari).—Would the Hon. Minister let us know who is responsible for supplying him wrong information and what action he has already taken against them ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟ ಉತ್ತರದಲ್ಲಿ ಎಲ್ಲಾ ವಿಷಯಗಳನ್ನೂ ವಿವರಿಸಿದ್ದೇನೆ. ಆಜ್ಞಾತುರ್ಯದಿಂದ ಈ ರೀತಿಯಾಗಿದೆ. ಡಿವಿಜನಲ್ ಕಮಿಷನರು ವೆರಿಫೈ ಮಾಡಿ ಅಥವ ಮಾಡದೆ ಬರದಿಮಾಡಿದರು ಅದರ ಮೇಲೆ ಸೆಕ್ರೆಟೇರಿಯಟ್ಟಿನಲ್ಲಿ ಹುಕುಂ ಹೊರಡಿಸಿದ್ದಾರೆ. ವೆರಿಫೈ ಮಾಡಬೇಕಾಗಿತ್ತು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರಲ್ಲಿ ನಾನು ಭಾಗಿಯಾಗಿದ್ದೇನೆ. ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದ್ದು ಧರ್ಮ. ಅದರ ಪ್ರಕಾರ ಮಾಡಬೇಕಾಗಿತ್ತು. ಓವರ್‌ಸೈಟ್‌ನಿಂದ ಈ ರೀತಿಯಾಗಿದೆ, ವೆರಿಫೈ ಮಾಡಬೇಕಾಗಿತ್ತು. ಮಾಡಲಿಲ್ಲ. ಇಂಥ ದಿವಸ ಅವಧಿ ಮುಂಗಿಯಾಗುತ್ತದೆ ಆರ್ಡರು ಇಷ್ಟು ಮಾಡಬೇಕಾಗಿದೆ ಎಂದು ಹೇಳಿದರು, ಇರಬಹುದು ಎಂದು ಮೂಮೂಲಾಗಿ ಹೇಳುವಂತೆ ಮಾಡಿ ಎಂದು ಹೇಳಿದೆ ಅವರು ವೆರಿಫೈ ಮಾಡಿಲ್ಲ. ಮೊದಲಿಂದ ಕೊನೆಯವರೆಗೆ ತಪ್ಪಾಗಿದೆ. ಇದು ಗೊತ್ತಾದಮೇಲೆ ಆರ್ಡರನ್ನು ಜಾರಿಗೆ ಕೊಡದೆ ವಿತ್‌ಡ್ರಾ ಮಾಡಿದ್ದೇವೆ ಮೊದಲು ಯಾರು ಕೌನ್ಸಿಲರುಗಳಿದ್ದರೋ ಈ ದಿವಸ ಕೂಡ ಅವರೇ ಇರುವರು, ನಾಲ್ಕು ವರ್ಷ ಅವರು ಮುಂದುವರೆಯುವರು.

ಶ್ರೀ ಕಾಗೋಡು ತಿಮ್ಮಪ್ಪ.—ಡಿವಿಜನಲ್ ಕಮಿಷನರು ಅಡ್ಮಿನಿಸ್ಟ್ರೇಟರ್ ಅಪಾಯಿಂಟ್ ಮಾಡುವುದಕ್ಕೆ ಕಾರಣವೇನು ಕೊಟ್ಟಿದ್ದರು ?

SRI B. B. SAYANAK.—The Divisional Commissioner has given the wrong information to the Hon. Minister. Whether he is going to take action against the Divisional Commissioner ? What is the report of the Divisional Commissioner ?

ಶ್ರೀ ಎಚ್. ಎಸ್. ಸಿದ್ದಪ್ಪ.—ಇದರಲ್ಲೇನಾಗಿದೆಯೆಂದರೆ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡುತ್ತೇವೆಂದು ಮಂತ್ರಿಗಳು ಹೊರಟರು. ಸರಿಯೋ ತಪ್ಪೋ ಅದರಂತೆ ಅಡ್ಮಿನಿಸ್ಟ್ರೇಟರನು ನೇಮಕ ಮಾಡಿ ಎಂದು ಹೇಳಿದರು. ಡಿವಿಜನಲ್ ಕಮಿಷನರು ರಾಂಗ್ ಇನ್‌ಫರ್ಮೇಷನ್ ಕೊಟ್ಟರು ಅಂದರೆ, ಎಷ್ಟು ಸಿಬ್ಬಂದಿಯಿದೆ, ಯಾರೂ ಅದು ಸರಿಯಾಗಿದೆಯೇ ಇಲ್ಲವೇ ಎಂಬುದನು ನೋಡಬೇಡವೇ ? ಈಗ ಓವರ್‌ಸೈಟ್‌ನಿಂದ ಹೀಗಾಯ್ತು ಎಂದು ಹೇಳುವರು. ಇದರಿಂದ ಪ್ರಜಾಪ್ರಭುತ್ವದಲ್ಲಿ ಚುನಾಯಿತರಾದ ಕೌನ್ಸಿಲರುಗಳಿಗೆ ಅವಮಾನ ಮಾಡಿದಂತಾಗಲಿಲ್ಲವೇ ? ಬೈ ಓವರ್ ಸೈಟ್‌ನಿಂದ ಹೀಗಾಯಿತು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹೀಗೆ ಮುನಿಸಿಪಾಲಿಟಿಗಳನ್ನು ರದ್ದು ಮಾಡುವ ಅಭ್ಯಾಸವಾಗಿ ರದ್ದು ಮಾಡಿದರು. ಕೊಟ್ಟಿರುವ ಉತ್ತರ ಸಮಂಜಸವಾಗಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಡಿವಿಜನಲ್ ಕಮಿಷನರಿಂದೇನು ವರದಿ ಬಂದಿದೆಯೆಂಬುದನ್ನು ಪೂರ್ಣವಾಗಿ ಕೇಳಬೇಕು. ಯಾವ ಆಧಾರದಮೇಲೆ ಕ್ರಮ ತೆಗೆದುಕೊಂಡಿರಿ ?

SRI B. BASAVALINGAPPA.—The Divisional Commissionor has reported that the term of the following Town Municipal Councils of Mandya District is due to expire on the dates noted against each :

Maddur Municipality		...	8-1-1973
Malavalli	,,	...	3-1-1973
TMC Belakwadi	,,	...	30-1-1972
Srirangapatna	,,	...	21-12-1972
TMC Bellur	,,	...	17-1-1973

This is the report of the Divisional Commissioner. Since he reported that the term of these municipalities is due to expire on the dates mentioned against each it did not require much verification. We have to believe officers at some stage and since we believed it we passed the orders, I own the mistake. Believing in good faith we have done it Mr. Krishnappa gave me a letter on 19th January 1973 bringing certain things to my notice. I asked the office to work out the paper and after it was worked out immediately I have taken the necessary action in the matter.

ಶ್ರೀ ಎಚ್. ಎಸ್. ಸಿದ್ದಪ್ಪ.—ನಮಗೆ ಭಯವೇನೆಂದರೆ ಈ ರೀತಿ ನೋಟ್ ಹಾಕಿ ಬರೆಯುವವರು ನಿಮ್ಮ ರಾಜೀನಾಮೆಗೆ ಬರೆದು ಎಲ್ಲ ರುಜು ಹಾಕಿಸಿಬಿಡುವರೋ ಎಂಬುದು.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಅವಕಾಶವಾಗುವುದಿಲ್ಲ. ಸಿದ್ದಪ್ಪನವರು ನನಗೆ ಗೌರವ, ನನ್ನ ವಿಚಾರ ಅವರಿಗೆ ಗೊತ್ತಿದೆ, ಆ ರೀತಿಯಾಗುವ ಸಂಭವವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸರಕಾರ ಮಿಸ್‌ಲೀಡ್ ಆಗಿರುವುದಕ್ಕೆ ಕಾರಣ ಡಿವಿಜನಲ್ ಕಮಿಷನರ ವರದಿ. ತಪ್ಪು ವರದಿ ಕೊಟ್ಟಿದ್ದಕ್ಕೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳಬೇಕಾಗಿತ್ತು. ಹಾಗೆ ಮಾಡದೆ ಬಿಟ್ಟರೆ ಮುಂದೆಯೂ ಹೀಗೆಯೇ ಮಾಡುವರು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೂಡಲೆ ಶಿಕ್ಷೆ ಮಾಡಲು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಬರೀ ಅಧಿಕಾರಿಯ ಮೇಲೆ ಅಲ್ಲ ಇಲ್ಲಿರುವವರು ಮಂತ್ರಿಗಳು. ಆದುದರಿಂದ ಪೂರ್ಣ ಜವಾಬ್ದಾರಿ ಸರಕಾರದ್ದು ಮತ್ತು ಮಂತ್ರಿಗಳದು. ಈ ತಪ್ಪಿಗೆ ಅವರು ಈ ಸಭೆಯ ಕ್ಷಮೆ ಕೇಳಬೇಕು. ಪ್ರತಿಯೊಂದಕ್ಕೂ ಸುಮ್ಮನೆ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ತಪ್ಪು ಮಾಡಿದ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೀರಾ ? ಎನ್‌ಕ್ವೈರಿ ಮಾಡಿದ್ದೀರಾ ? ಅಧಿಕಾರಿ ಹೇಳಿದ ಅಂದರೆ ಅದರಂತೆ ನಡೆಯುವುದಾದರೆ ಸರಕಾರ ಹೇಗೆ ನಡೆದೀತು ? ಇದು ಸಾಲಭವಾದ ಪ್ರಶ್ನೆಯಲ್ಲ, ಇದು ಗಹನವಾದ ಗಂಭೀರವಾದ ಪ್ರಶ್ನೆ ಅಧಿಕಾರಿಗಳ ಮೇಲೆ ತಪ್ಪು ಹೊರಿಸುವ ಪ್ರಶ್ನೆಯಲ್ಲ ಇದು. ನಮಗೆ ಮಂತ್ರಿಗಳು ಜವಾಬ್ದಾರರು. ಆದುದರಿಂದ ಶ್ರೀ ಬಸವಲಿಂಗಪ್ಪನವರು ಈ ತಪ್ಪು ಮಾಡಿರುವುದಕ್ಕೆ ರಾಜೀನಾಮೆ ಕೊಡಬೇಕು. ಇದಕ್ಕೆ ನಾವು ಒತ್ತಾಯ ಮಾಡುತ್ತೇವೆ. ಈಗ ಮಾಡಿರುವುದು ಬೇಜವಾಬ್ದಾರಿ ಕೆಲಸ, ಜವಾಬ್ದಾರಿಯಿಂದ ಮಾಡಿರುವುದಲ್ಲ. ಇದಕ್ಕೆ ಕಾರಣ ಒಬ್ಬ ಡಿವಿಜನಲ್ ಕಮಿಷನ ಮಾಡಿರುವ ತಪ್ಪು ಅದರೂ ಬೈ ಒವರ್‌ಸೈಟ್ ಎಂದು ಹೇಳುವುದಾದರೆ ಇದೇನು ಕಬ್ಬಿನ್ಸ್ ಪಾರ್ಕೇ ? ಈ ರೀತಿ ಮಾಡುತ್ತಿದ್ದರೆ ಎಲ್ಲಿಯವರೆಗೆ ಗೌರವ ಕೊಡುವುದು ? ರಾಜಧ್ಯಕ್ಷರೇ ಇದು ನಗುವ ಪ್ರಶ್ನೆಯಲ್ಲ ಮಾನ್ಯ ಹಿರಿಯ ಸದಸ್ಯರಾದ ಮಂತ್ರಿಗಳಿಬ್ಬರು ನಗುತ್ತಿದ್ದಾರೆ. ಬಸವಲಿಂಗಪ್ಪನವರ ಪರಿಸ್ಥಿತಿ ನೋಡಿ ಅವರಿಗೆ ನಗುವಹಾಗೆ ಆಗಿರಬಹುದು. ನಾನು ನಗುವುದಿಲ್ಲ. ಇದು ಗಹನವಾದ ವಿಚಾರ. ಇದು ಬೇಜವಾಬ್ದಾರಿ ಕೆಲಸ. ಇದನ್ನು ಮಾಡಿರುವುದು ಯಾರೋ ಗುಮಾಸ್ತರಯಲ್ಲ ಉನ್ನತ ಅಧಿಕಾರದಲ್ಲಿರುವವರು ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ, ಮಂತ್ರಿಗಳು ಅವರ ಜೊತೆಗೆ ಸೇರಿಕೊಂಡಿರುವುದರಿಂದ ನಾನು ಅವರು ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

2-30 P.M.

SRI K. PUTTASWAMY.—Mandm Speaker, I would like to ask one clarification. From the Divisional Commissioner's letter, which the Hon'ble Minister was pleased to read out, I gather that the term of a number of Municipalities in Mandya District was due to expire. I presume the normal period of four years was due to expire. Under the Municipalities Act there is a provision to enable the Government to

(SRI K. PUTTASWAMY)

extend the term of the Municipal Councils by another year if for any reason they are not able to hold the elections. I would like to ask the Hon'ble Minister whether it is the policy of the Government to take over all municipalities and entrust their administration to Administrators and not allow the duly elected bodies to function, if for any reason they are not able to hold the elections.

SRI B. BASAVALINGAPPA .—Madam Speaker, I thank the hon. members for taking very keen interest in this matter. I fail to understand how my friend S i Vatal Nagaraj say that it is a very big mistake leading to certain things. I deny it. Many things happen by over sight. The Notification was not implemented. This is a small matter.

SRI B. B. SAYANAK .—This is a very serious matter ; this is not a small matter. The Hon'ble Minister has committed a mistake.

SRI B. BASAVALINGAPPA .—I have already stated that there has been a mistake by over sight by the office. But since I have passed the final orders on the note put up by the Secretariat, I own the mistake as I have already stated. I do not keep a statement of all the Municipalities about the expiry of their term. It is the Secretariat who maintains it, and it is their job to give correct information and guide the Minister. As the hon. members are aware ours is a very voluminous work. If I cannot believe the Divisional Commissioner or the Secretariat, who else should I believe ? If the officers have committed mistakes, they must own their mistakes.

As regards the point raised by the hon. member Sri K. Puttaswamy as to whether it is the policy of the Government to take over the administration of the municipalities and all that, I have made the point very clear that the Divisionl Commissioner could not finalise the territorial divisions on the basis of 1971 Census. We are finalising all these territorial divisions and we are going to allow the democratic bodies to function. But, wherever, we find that these bodies are not functioning well and they are functioning against the provisions of the Municipal Act, then we have to supersede them—I am going to supersede them. As soon as Sri Krishnappa came to my chambers and pointed out the deffects I called for the papers immediately and issued orders that the Notification should be withdrawn and it shouid not be implemented. The Municipal Council continues and there is no break.

SRI K. PUTTASWAMY .—I am sorry the Hon'ble Minister has not replied to my question. My question was very simple.

ಸಾಮಾನ್ಯವಾಗಿ ಮುನಿಸಿಪಾಲಿಟಿಗಳಿಗೆ ಚುನಾವಣೆ ಮಾಡುವುದಕ್ಕೆ ನಾಲ್ಕು ವರ್ಷ ಅವಧಿ ಇರುವುದು. ನಾಲ್ಕು ವರ್ಷದ ಅವಧಿಯಲ್ಲಿ ಯಾವುದಾದರೂ ಕಾರಣದಿಂದ ಚುನಾವಣೆ ಮಾಡುವುದಕ್ಕೆ ಅವಕಾಶವಾಗದಿದ್ದರೆ, ಚುನಾವಣೆ ಆಗದೆ ಹೋದಂಥ ಕಾಲದಲ್ಲಿ ಸರ್ಕಾರಕ್ಕೆ ಮತ್ತೊಂದು ವರ್ಷ ಅವಧಿಯನ್ನು ವಿಸ್ತರಿಸುವುದಕ್ಕೆ ಅವಕಾಶವಿದೆ. ನಾನು ಕೇಳಿದ ಪ್ರಶ್ನೆ, ಈ ಒಂದು ಅವಕಾಶವನ್ನು ಏತಕ್ಕೆ ಉಪಯೋಗಿಸಿಕೊಳ್ಳಲಿಲ್ಲ ಎಂದು. ಯಾವುದಾದರೂ ಪುರಸಭೆಗಳು ತಮ್ಮ ಕಾರ್ಯವನ್ನು ಸಮರ್ಪಕವಾಗಿ ಮಾಡದೆ ಇದ್ದರೆ ಸರ್ಕಾರ ಆ ಪುರಸಭೆಗಳಿಗೆ ನೋಟೀಸ್ ಕೊಟ್ಟು, ಸಮಜಾಯಿಷಿ ಕೇಳಿ, ಸೂಪರ್‌ಸೀಡ್ ಮಾಡುವ ಹಕ್ಕು ಸರ್ಕಾರಕ್ಕೆ ಇದೆ. ಹಾಗೆ ಮಾಡುವುದನ್ನು ನಾನೂ ಒಪ್ಪುತ್ತೇನೆ. ಆದರೆ ಸಕಾರಣವಾಗಿ ಸೂಪರ್‌ಸೀಡ್ ಮಾಡದೆ ಹೋದಂಥ ಕಾಲದಲ್ಲಿ ಈ ಒಂದು ಅನ್ಯಾಯ ಹೈಕೋರ್ಟಿಗೆ ಹೋದರೆ ನಿಲ್ಲುವುದಿಲ್ಲ. ಆದ್ದರಿಂದ ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ, ಅವರು ವಕೀಲರಾಗಿರುವವರು. ಸೂಪರ್‌ಸೀಡ್ ಮಾಡುವ ಕಾಲದಲ್ಲಿ ಸಾಕಷ್ಟು ಜವಾಬ್ದಾರಿಯಿಂದ ಮಾಡುತ್ತಾರೆಂದು ತಿಳಿದುಕೊಳ್ಳುತ್ತೇನೆ. ಸೂಪರ್‌ಸೀಡ್ ಮಾಡಿದ ವಿಚಾರವನ್ನು ನಾನು ಪ್ರಶ್ನೆ ಮಾಡಿಲ್ಲ ನಾಲ್ಕು ವರ್ಷದ ಅವಧಿಯಾದ ಮೇಲೆ ಐದನೆಯ ವರ್ಷ ಚುನಾವಣೆ ನಡೆಸುವುದಕ್ಕೆ ಅವಕಾಶವಾಗದೆ ಇದ್ದಪಕ್ಷದಲ್ಲಿ ನಾನಾದರೂ ನಿರೀಕ್ಷಣೆ ಮಾಡುತ್ತೇನೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಸರ್ಕಾರ ಆ ಮುನಿಸಿಪಾಲಿಟಿಗಳ ಅವಧಿಯನ್ನು ವಿಸ್ತಾರ ಮಾಡಬೇಕು ಎಂದು. ಆ ರೀತಿ ವಿಸ್ತರಣೆ ಮಾಡದೆ, ತಮ್ಮ ಮನಸ್ಸಿನಲ್ಲಿ ಆ ಮುನಿಸಿಪಾಲಿಟಿ ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಇಟ್ಟುಕೊಂಡು, ಈ ಅವಕಾಶವನ್ನು ಉಪಯೋಗಿಸಿಕೊಂಡು ಅವಧಿಯನ್ನು ವಿಸ್ತರಣೆ ಮಾಡದೆ ಹೋದರೆ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಂತಾಗುತ್ತದೆ ಎನ್ನುವ ತೀರ್ಮಾನವನ್ನು ಅನೇಕವೇಳೆ ಶ್ರೇಷ್ಠ ನ್ಯಾಯಾಲಯದವರು ಹೇಳಿದ್ದಾರೆ. ಆದ್ದರಿಂದ ನಾನು ಕೇಳುತ್ತೇನೆ, ನಾಲ್ಕು ವರ್ಷದ ಅವಧಿ ಮುಗಿದ ಮೇಲೆ. ಈ ಒಂದು ಅವಧಿಯನ್ನು ಐದು ವರ್ಷಕ್ಕೆ ಏಕೆ ವಿಸ್ತಾರ ಮಾಡಲಿಲ್ಲ ? ಏನು ಕಾರಣ ? ಹಾಗಿದ್ದರೆ, ನೋಟೀಸ್ ಕೊಟ್ಟು ಏತಕ್ಕೆ ಸೂಪರ್‌ಸೀಡ್ ಮಾಡುವುದಿಲ್ಲ ? ಅನೇಕವೇಳೆ ಯಾವುದಾದರೂ ಅಧಿಕಾರಿಗಳಿಗೆ ಶಿಕ್ಷೆ ಕೊಡಬೇಕಾದರೆ, ಮಾನ್ಯ ಚೆನ್ನಬಸಪ್ಪನವರ ತಂತ್ರದ ಒಂದು ಇದೆ. ಅದರ ಪ್ರಕಾರ ಅವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟು, ಆಮೇಲೆ ನೋಟೀಸ್ ಕೊಟ್ಟು, ಶಿಕ್ಷೆ ಮಾಡುತ್ತಾರೆ. ಪುರಸಭೆಗಳನ್ನು ಸೂಪರ್‌ಸೀಡ್ ಮಾಡುವುದೂ ಶಿಕ್ಷೆ ಮಾಡಿದ ಹಾಗೆ. ಮುನಿಸಿಪಾಲಿಟಿಗಳವರು ಅಪರಾಧ ಮಾಡಿದ್ದಾರೆ ಎಂದು ಮಾನ್ಯಮಂತ್ರಿಗಳಿಗೆ ಅನ್ನಿಸಿದರೆ, ಅವಧಿಯನ್ನು ವಿಸ್ತರಣೆ ಮಾಡಿ ನೋಟೀಸ್ ಕೊಟ್ಟು ಕೊಟ್ಟು ಸೂಪರ್‌ಸೀಡ್ ಮಾಡಬೇಕೇ ವಿನಹ ಹಿಂಭಾಗಿಲಿನಿಂದ ಹೋಗಿ ಸೂಪರ್‌ಸೀಡ್ ಮಾಡುವುದು ಯೋಗ್ಯವಲ್ಲ. ಅದಕ್ಕೆ ಏನು ಕಾರಣ ಹೇಳಿ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ .—ಮಾನ್ಯಸಭಾಧ್ಯಕ್ಷರೀಯವರೇ, ಇಲ್ಲಿ ಶ್ರೀಮಾನ್ ಕೃಷ್ಣಪ್ಪನವರು ಕೇಳಿರತಕ್ಕ ವಿಷಯು ಬರೀ ಬೆಳ್ಳೂರು ಮುನಿಸಿಪಾಲಿಟಿ ವಿಚಾರ. ಮುನಿಸಿಪಾಲಿಟಿಯ ಅವಧಿ ನಾಲ್ಕು ವರ್ಷವಾಗಿದ್ದಿಲ್ಲಿ, ಎರಡೂವರೆ ವರ್ಷಕ್ಕೆ ಸರ್ಕಾರದಿಂದ ಇಂಥ ಆರ್ಡರ್ ಹೋಗಿದ್ದು, ಪುನಃ ವಿತ್‌ಡ್ರಾ ಮಾಡಿದರು ಇದಕ್ಕೆ ಸಮಜಾಯಿಷಿ ಹೇಳಿ ಎಂದು ಅವರು ಕೇಳಿದರು, ಅದನ್ನು ಹೇಳುತ್ತಿದ್ದೇನೆ. ಮಾನ್ಯ ಪುಟ್ಟಸ್ವಾಮಿಯವರು ಕೇಳಿದ್ದು, ಮುನಿಸಿಪಲ್ ಆಕ್ಟಿನ ೧೪ ಕಲಂ ಪ್ರಕಾರ ಯಾವ ಯಾವ ಮುನಿಸಿಪಾಲಿಟಿಗಳಿಗೆ ನಾಲ್ಕು ವರ್ಷ ಪೂರ್ಣವಾಗಿರುತ್ತದೋ ಅಂಥವುಗಳಿಗೆ ಅವಧಿಯನ್ನು ಹೆಚ್ಚು ಮಾಡಬೇಕು ಎಂದಾಗ, ಸರ್ಕಾರದವರು ಮಾಡಲಿಕ್ಕೆ ಅವಕಾಶ ಉಂಟು. ನಾವು ಅವಧಿಯನ್ನು ವಿಸ್ತಾರ ಮಾಡುವುದಿಲ್ಲ ಎಂದಾಗ ಮಾಡುವುದಿಲ್ಲ ಈ ಪ್ರಶ್ನೆ ಹೇಗೆ ಉದ್ಭವವಾಯಿತು ? ನಾಲ್ಕು ವರ್ಷ ಆದಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಪ್ರಶ್ನೆ ಈ ಕಾಲ್ ಅಟೆನ್‌ಷನ್‌ನಲ್ಲಿ ಉದ್ಭವಿಸುವುದಿಲ್ಲ. ಮಾನ ಸದಸ್ಯರು, ಹಿರಿಯ ಸದಸ್ಯರು, ಅವರು ಸರ್ಕಾರದ ನೀತಿಯ ಬಗ್ಗೆ, ಪಾಲಿಸಿಯ ಬಗ್ಗೆ ಇನ್ನೊಂದು ಕಾಲ್ ಅಟೆನ್‌ಷನ್ ನೋಟೀಸ್ ಅನ್ನು ಕೊಡಲಿ, ಯಾರು ಬೇಡ ಎಂದು ಹೇಳಿದರು. ಈ ಕಾಲಿಂಗ್ ಅಟೆನ್‌ಷನ್ ನೋಟಿಸು ಬೆಳ್ಳೂರು ಮುನಿಸಿಪಾಲಿಟಿಗೆ ಅಡ್ಮಿನಿಸ್ಟ್ರೇಟರನ್ನು ನೇಮಿಸಿರುವ ಬಗ್ಗೆ ಇದೆ. ಅವರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ನಿವು ಯಾವ ಯಾವದೋ ಪ್ರಶ್ನೆಯನ್ನು ತಂದುಬಿಟ್ಟು ಉತ್ತರ ಕೊಡಿ ಎಂದು ಹೇಳಿದರೆ, ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ .—ಮಾನ್ಯ ಮಂತ್ರಿಗಳು ಶ್ರೀಮಾನ್ ಪುಟ್ಟಸ್ವಾಮಿಯವರ ಪ್ರಶ್ನೆಗೆ ಉತ್ತರ ಕೊಡುವುದಿಲ್ಲ ಎನ್ನುವ ಧಾಟಿ ನೋಡಿದಾಗ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟವಿದೆ ಎಂದು ಕಾಣುತ್ತದೆ. ತಾವೇ ಹೇಳಿದಿರಿ ಯಾತಕ್ಕೋಸ್ಕರ ಅಡ್ಮಿನಿಸ್ಟ್ರೇಟರ್ ಅಪಾಯಿಂಟ್ ಮಾಡಿದ್ದೇವೆ ಎನ್ನುವ ತಕ್ಕಂಥಾದ್ದಕ್ಕೆ ಕಾರಣ ಕೊಟ್ಟಿದ್ದೀರಿ. ೧೯೭೧ರ ಜನಗಣತಿ ಪ್ರಕಾರ ಆ ಆಧಾರದ ಮೇಲೆ ಪುನಃ ವಾರ್ಡ್ ಟೋರಿಯಲ್ ಡಿವಿಜನ್ ಪುನರ್ ವಿಂಗಡನೆ ಆಗಬೇಕಾಗಿರುವುದರಿಂದ ಅದು ಸಕಾಲದಲ್ಲಿ ಆಗದೆ ಹೋದ ಪ್ರಯುಕ್ತ ಅಡ್ಮಿನಿಸ್ಟ್ರೇಟರ್ ಹಾಕಿದ್ದೇವೆ ಎಂದು ಹೇಳಿದಿರಿ. ಶ್ರೀಮಾನ್ ಪುಟ್ಟಸ್ವಾಮಿಯವರು ಕ್ಲಾರಿ

(ಶ್ರೀ ಹೆಚ್. ಡಿ. ದೇವೇಗೌಡ)

ಫಿಕೇಷನ್ ಕೇಳಿದಾಗ ಹೇಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದೀರಿ. ನಾನು ಗೌರ್ನರ್ ಅಡ್ರೆಸ್ ಮೇಲೆ ಮಾತನಾಡತಕ್ಕ ಕಾಲದಲ್ಲಿ ಈ ಬಗ್ಗೆ ಸರ್ಕಾರದ ಮೇಲೆ ಆಪಾದನೆ ಮಾಡಿದ್ದೇನೆ. ಮುಖ್ಯಮಂತಿಗಳು ಯಾವ ಯಾವುದಕ್ಕೂ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಈ ಸಂದರ್ಭದಲ್ಲಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆ ಪಾಯಿಂಟ್‌ಗೆ ಉತ್ತರ ಕೊಡಲಿಲ್ಲ. ದಯಮಾಡಿ ತಾವು ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಸೆಕ್ಷನ್ ೧೫ರ ಪ್ರಕಾರ ಇವೊತ್ತು ಅಸೆಂಬ್ಲಿಯೊಳಗೆ ಏನು ಓಟರ್‌ಲಿಸ್ಟ್ ಇರುತ್ತದೆ ಆ ಅಸೆಂಬ್ಲಿ ಓಟರ್‌ಲಿಸ್ಟ್ ಆಧಾರದ ಮೇಲೆ ಇವೊತ್ತು ಮುನಿಸಿಪಲ್ ಎಲೆಕ್ಷನ್ ನಡೆಯಬಹುದು ಎಂದು ಇದೆ. ತಾವು ಏನೂ ಸಭೆಯನ್ನು ಮಿಸ್‌ಲೀಡ್ ಮಾಡುವುದಕ್ಕೆ ಹೋಗಬೇಡಿ.

SRI B. BASAVALINGAPPA .– I raise a point of order. The point is that the calling attention notice relates to the Bellur Municipality. The Hon. Members are entitled to put questions pertaining to Bellur Municipality and question me as to why such a premature order was issued. They can put questions on this matter. But if the hon. members were to put questions pertaining to the policy of the Government in this respect, I cannot answer. If they give notice of a question regarding the policy of the Government, I am prepared to answer them. I request the Hon. Speaker kindly to direct the members to put questions relating to Bellur Municipality.

SRI H. D. DEVE GOWDA .—He wants to take shelter under the guise of policy because the questions put to him do not suite him.

SRI B. BASAVALINGAPPA .—I am prepared to answer any question relating to Bellur Municipality.

MADAM SPEAKER .—According to the Hon. Minister, he is perfectly correct The hon. member you must send another notice to discuss the policy matter.

ಶ್ರೀ ಕೆ. ಎಂ. ನಾಗಣ್ಣ .—ಬೆಳ್ಳಾರಿ ಮುನಿಸಿಪಾಲಿಟಿ ಬಗ್ಗೆ ಅಲ್ಲಿ ಆಡ್ಮಿನಿಸ್ಟ್ರೇಟರನ್ನು ಯಾವ ಕಾರಣದಿಂದ ಹಾಕಿದರೆಂದು ಅರ್ಥವಾಗುತ್ತದೆ ಎಲೆಕ್ಷನ್ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ ಅಧಿಕಾರಿಗಳನ್ನು ಹಾಕಿದ್ದೇವೆ ಎಂದು ಹೇಳಿದರು. ಎಲೆಕ್ಷನ್ ನಡೆಸದೆ ಒಂದು ವರ್ಷ ಅವಧಿಯನ್ನು ಕೊಡಲಿಕ್ಕೆ ಅವಕಾಶವಿರುವಾಗ ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ಮುನಿಸಿಪಲ್ ಕೌನ್ಸಿಲ್ ಟೈಮ್ ಮುಗಿದಿದ್ದರೂ ಒಂದು ಎಕ್ಸ್‌ಟೆನ್‌ಕ್ಷನ್ ಕೊಡುವುದಕ್ಕೆ ಅವಕಾಶ ಇರಬೇಕಾದರೆ ಆ ಅವಕಾಶವನ್ನು ಉಪಯೋಗ ಮಾಡಿಕೊಳ್ಳದೆ ಇನ್ನು ಇದ್ದ ಅವಧಿಯೊಳಗೆ ಬೆಳ್ಳಾರಿ ಮುನಿಸಿಪಾಲಿಟಿಯನ್ನು ರದ್ದುಪಡಿಸಿದ್ದಾರೆ, ಏತಕ್ಕೆ ?

ಶ್ರೀ ಬಿ. ಬಸವಲಿಂಗಪ್ಪ .—ಇನ್ನೊಂದು ಕಾಲ್ ಅಟೆನ್‌ಷನ್ ನೋಟೀಸು ಕಳುಹಿಸಲಿ ಉತ್ತರ ಕೊಡುತ್ತೇನೆ ?

ಶ್ರೀ ಕೆ ಎಂ. ನಾಗಣ್ಣ .—ಇನ್ನೂ ಅವಧಿ ಇದ್ದರೂ ಸಹಿತ ಮುನಿಸಿಪಾಲಿಟಿಯನ್ನು ರದ್ದು ಮಾಡುವುದಕ್ಕೆ ಏನು ಕಾರಣ ? ಅವಧಿ ಮುಗಿದ ಮೇಲೂ ಒಂದು ವರ್ಷ ಅವಧಿಯನ್ನು ಮುಂದುವರಿಸಲು ಅವಕಾಶ ಇದ್ದರೂ ಎರಡೂವರೆ ವರ್ಷಕ್ಕೆ ಪಜಾ ಮಾಡಿದ್ದಾರೆ. ಈಗ ನಾನು ಪಾಪಸ್ ತೆಗೆದುಕೊಂಡಿದ್ದೇನೆ ಎಂದು ಈ ರೀತಿ ಮಂತ್ರಿಗಳು ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕಾದವರು ಕಣ್ಣು ಮುಚ್ಚಿಕೊಂಡು ಸಹಿ ಹಾಕಿ ವಾಪಸ್ ತೆಗೆದುಕೊಂಡೆ ಎನ್ನುವುದರಲ್ಲಿ ಅರ್ಥವಿಲ್ಲ. ಇದು ಜವಾಬ್ದಾರಿ ವರ್ತನೆ ಇವರು ಮಂತ್ರಿಗಳಾಗಿ ಇರಲಿಕ್ಕೆ ಅರ್ಹರೇ ಎಂಬುದನ್ನು ಸಭೆ ತೀರ್ಮಾನ ಮಾಡಬೇಕು. ಅವರು ಗೌರವವುಳ್ಳವರಾಗಿದ್ದಾರೆ ತಕ್ಷಣ ರಾಜೀನಾಮೆ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ .—ಅವರು ಹೇಳಿದ ಪ್ರಶ್ನೆಗೆ ಉತ್ತರ ಕೊಡುವುದು ಅಷ್ಟು ಸೂಕ್ತ ಎಂದು ಅನಿಸುವುದಿಲ್ಲ, ಶ್ರೀಮಾನ್ ದೇವೇಗೌಡರ ಪ್ರಶ್ನೆಗೆ ರೂಲಿಂಗ್ ಕೊಟ್ಟಿದ್ದಾರೆ. ಮಾನ್ಯ ನಾಗಣ್ಣನವರಿಗೆ ಎಷ್ಟು ಸಂಕಟವಾಗಿದೆಯೋ ನಾನು ಮಂತ್ರಿಯಾಗಿರುವುದು ? ಅವರಿಗೆ ಯಾತಕ್ಕೆ ಸಂಕಟ ಬಂದಿರುವುದು ?

ಶ್ರೀ ಕೆ. ಎಂ. ನಾಗಣ್ಣ .—ತಾವು ಮಂತ್ರಿಗಳ ಹುದವಿಯಲ್ಲಿ ಇರಲು ಸಾಧ್ಯವಿಲ್ಲ.

ಶ್ರೀ ಬಿ. ಬಸವಲಿಂಗಪ್ಪ .—ಕಂಳಿತುಕೊಳ್ಳಿರಿ ಸಾಕಂ.

ಶ್ರೀ ಕೆ. ಎಂ. ನಾಗಣ್ಣ .—ಮಂತ್ರಿಯಾಗಬೇಕಂ ಎನ್ನುವುದು ಮುಖ್ಯವಲ್ಲ. ನೀವು ಮಂತ್ರಿಗಳಾಗುವುದಕ್ಕೆ ಅಯಕ್ಕು ಇಲ್ಲ. ನೀವು ಮೊದಲು ದಯವಿಟ್ಟು ರಾಜಿನಾಮೆ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ .—ನನಗೆ ಗೊತ್ತು ಯಾವಾಗ ರಾಜಿನಾಮೆ ಕೊಡಬೇಕೆಂದು. I know when to resign.

SRI H. D. DEVEGOWDA .—As a responsible person, the Hon. Minister for Municipal Affairs should not go to the extent of saying that the Hon. Member should sit down. Even an ordinary member canot use such a word against another colleague member. I request him to please withdraw that word.

SRI B. BASAVALINGAPPA .—I should not have used the word ' sit down '.

MADAM SPEAKER .—He has withdrawn the word ' sit down '.

INTRODUCTION OF BILLS

(i) Mysore Prohibition of Beggary Bill 1973 — Introduction

SRI M. MALLIKARJUNASWAMY (Minister for Social Welfare) .—Madam Speaker, I beg to introduce the Mysore Prohibition of Beggary Bill, 1973 which has been published under Rule 64 of the Rules of Procedure and Conduct of Business in the Mysore Legislative Assembly.

MADAM SPEAKER .—The bill is introduced. Both the Bills are appended to this Volume.

(ii) Bangalore Water Supply and Sewerage (Amendment) Bill 1973 — Introduction.

SRI B. BASAVALINGAPPA (Minister for Municipal Administration).—I beg to introduce the Bangalore Water Supply and Sewerage (Amendment) Bill, 1973.

MADAM SPEAKER .—The bill is introduced. Both the Bill are appended to this Volume.